ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಸೋಮವಾರ, ದಿನಾಂಕ : 07 ನೇ ಡಿಸೆಂಬರ್, 2020

ಆನೆ ಹಾವಳಿ ತಡೆಗೆ ಕೈಗೊಂಡಿರುವ ಮಂಜಾಗ್ರತಾ ಕ್ರಮಗಳ ಕುರಿತು

ಡಾ|| ತೇಜಸ್ವಿನಿಗೌಡ(ವಿಧಾನಸಭೆಯಿಂದ ಚುನಾಯಿತರಾದವರು) -

73 (171) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ರಾಜ್ಯದಲ್ಲಿ ಆನೆ ಹಾವಳಿ ನಿಯಂತ್ರಣ ಕುರಿತು ಮಾಹಿತಿ ನೀಡುವುದು;

(ಆ) ಅರಣ್ಯದ ಅಂಚಿಗೆ ಆನೆ ದಾಳಿ ತಡೆಯಲು ರೈಲು ಹಳಿ ಕಂಬಿ ಅಳವಡಿಕೆ ಕಾರ್ಯ ಪ್ರಾರಂಭವಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಕಿ.ಮೀ ಪೂರ್ಣಗೊಂಡಿದೆ ಇದಕ್ಕೆ ವೆಚ್ಚವಾಗುವ ಅನುದಾನ ಎಷ್ಟು; ಸದರಿ ಅನುದಾನವನ್ನು ಎಲ್ಲಿಂದ ಭರಿಸಲಾಗುವುದು;

(ಇ) ಅರಣ್ಯದಲ್ಲಿ ಕಳೆದ ವರ್ಷ ತಗುಲಿದ ಬೆಂಕಿ ಅನಾಹುತದಲ್ಲಿ ಮೃತ ಪಟ್ಟ ವನ್ಯ ಜೀವಿಗಳು ಯಾವುವು; (ಸಂಖ್ಯಾವಾರು ವಿವರ ಒದಗಿಸುವುದು)

(ಈ) ನಾಶಗೊಂಡ ಅರಣ್ಯ ಪುನರ್ ವೃದ್ಧಿ ಹಾಗೂ ವನ್ಯ ಜೀವಿಗಳಿಗೆ ಸುರಕ್ಷಿತ ಅರಣ್ಯ ಪರಿಸರ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?